
ಸರಕಾರಿ ಹಯರ್ ಸೆಕೆಂಡರಿ ಶಾಲೆ ಪೈವಳಿಕೆನಗರ

# ಪ್ರತಿಧ್ವನಿ

**ಪೈವಳಿಕೆನಗರ ಸರಕಾರಿ ಹಯರ್ ಸೆಕೆಂಡರಿ ಶಾಲೆಯ ವಿದ್ಯಾರ್ಥಿಗಳ ಮ್ಯಾಗಝಿನ್**
**2018–19**



ಪೈವಳಿಕೆನಗರ ಸರಕಾರಿ ಹಯರ್ ಸೆಕೆಂಡರಿ ಶಾಲೆಯ ಲಿಟ್ಲ್ ಕೈಟ್ ಯೂನಿಟ್ ಪ್ರಕಟಣೆ

# ಪ್ರತಿಧ್ವನಿ

<u>ಮುಖ್ಯ ಸಂಪಾದಕರು</u>

**ಶ್ರೀಮತಿ ಶ್ಯಾಮಲ ಪಿ, ಮುಖ್ಯೋಪಾಧ್ಯಾಯಿನಿ**

<u>ಸಂಪಾದಕರು</u>

**ಶ್ರೀ ಚಂದ್ರಶೇಖರ ಡಿ**

**ಶ್ರೀಮತಿ ರೈನ ಇವೆಟ್ ಡಿಸೋಜ**

<u>ಸಂಪಾದಕೀಯ ಬಳಗ</u>

**ಸಾತ್ವಿಕ್ ಎನ್**
**ಮನೀಶ್ ಪಿ**
**ರೋಯಿಸ್ಟನ್ ರೋಡ್ರಿಗಸ್**
**ಅಝ್ಮಿ**
**ಖದೀಜತ್ ಶಮ್ನಿರ್ಝ**
**ಆಯಿಷತ್ ಉನೈಸ**
**ನಫೀಸತ್ ಮಿಸಿರಿಯ**
**ಮನೀಶ್ ಎಸ್**
**ವಿಘ್ನೇಶ್**
**ಹರ್ಷಿತ ಎಚ್**
**ಅನುಜ್ಞಕುಮಾರಿ ಪಿ ಆರ್**
**ಸೃಜನ್ಯ**
**ಮರಿಯಮತ್ ಸುರಯ್ಯ**

# ಸಂಪಾದಕೀಯ

ವಿದ್ಯೆಯು ವಿನಯವನ್ನು ಕರುಣಿಸುತ್ತದೆ. ವಿನಯವು ಇತರರೊಂದಿಗೆ ಕೂಡಿ ಬಾಳುವುದನ್ನು ಕಲಿಸುತ್ತದೆ. ತಂತ್ರಜ್ಞಾನದ ನಾಗಾಲೋಟದಲ್ಲಿ ನಲುಗಿ ಹೋಗಿರುವ ಇಂದಿನ ಯುವ ಸಮೂಹ ರಕ್ಷಕರ ಶಿಕ್ಷಕರ ಮಮತೆಗಿಂತ ಹೆಚ್ಚು ಗೆಳೆಯರ ಬಳಗವನ್ನು ಅವಲಂಬಿಸಿದೆ ಎಂದರೆ ತಪ್ಪಾಗಲಾರದು. ಇಂತಹ ಪರಿಸ್ಥಿತಿಯಲ್ಲೂ ವಿದ್ಯಾರ್ಥಿಗಳ ಮನಸ್ಸನ್ನರಿತು ಆಧುನಿಕ ತಂತ್ರಜ್ಞಾನದೊಂದಿಗೆ ಎಳೆಯ ಮಕ್ಕಳ ಮುಗ್ಧ ಮನಸ್ಸನ್ನು ಜ್ಞಾನದ ಬೆಳಕಿನೆಡೆಗೆ ಸಾಗಿಸುವ ಉತ್ತಮ ಕಾರ್ಯವನ್ನು ಪೈವಳಿಕೆನಗರ ಸರಕಾರಿ ಹಯರ್ ಸೆಕೆಂಡರಿ ಶಾಲೆಯು ಮಾಡುತ್ತಿದೆ.

ಊರ ವಿದ್ಯಾಭಿಮಾನಿಗಳ ಸಾಧನೆಯ ಫಲವಾಗಿ 1904ನೇ ಇಸವಿಯಲ್ಲಿ ಪೈವಳಿಕೆ ಭಾಗದಲ್ಲಿ ಒಂದು ಪ್ರಾಥಮಿಕ ಶಾಲೆ ಆರಂಭವಾಯಿತು. ಬಲವಾದ ಇಚ್ಛಾಶಕ್ತಿಯಿಂದಾಗಿ 1981 ರಲ್ಲಿ ಈ ಶಾಲೆಯು ಪ್ರೌಢಶಾಲೆಯಾಗಿ ಭಡ್ತಿಗೊಂಡಿತು. 2001ರಲ್ಲಿ ಹಯರ್ ಸೆಕೆಂಡರಿ ತರಗತಿಗಳು ಆರಂಭವಾದವು. ಪೈವಳಿಕೆನಗರದ ಹೃದಯ ಭಾಗದಲ್ಲಿ ನೆಲೆಸಿದ ಶಾಲೆಯು ಪೈವಳಿಕೆ ಪಂಚಾಯತಿನಲ್ಲಿಯೇ ಅತೀ ಹೆಚ್ಚು ವಿದ್ಯಾರ್ಥಿಗಳು ಕಲಿಯುತ್ತಿರುವ ಕನ್ನಡ ಮತ್ತು ಮಲಯಾಳ ಮಾಧ್ಯಮ ಇರುವ ಏಕೈಕ ಹಯರ್ ಸೆಕೆಂಡರಿ ಶಾಲೆಯಾಗಿದೆ.

ಪೈವಳಿಕೆ ಪಂಚಾಯತಿನ ಸಾಂಸ್ಕೃತಿಕ ರಾಜಧಾನಿ ಎಂದೆನಿಸಿರುವ ಪೈವಳಿಕೆನಗರ ವಿವಿಧ ಸಂಸ್ಕೃತಿಗಳ ತವರೂರು. ಶಿಕ್ಷಕರು ಮತ್ತು ರಕ್ಷಕರ ಉತ್ತಮ ಬಾಂಧವ್ಯವೇ ಶಾಲೆಯ ಶಿಸ್ತಿನ ವಾತಾವರಣಕ್ಕೆ ಸಾಕ್ಷಿಯಾಗಿದೆ. ಶಾಲೆಯಲ್ಲಿ ಸುಸಜ್ಜಿತ ಪ್ರಯೋಗಾಲಯ, ಕಂಪ್ಯೂಟರ್ ಲ್ಯಾಬ್, ಗ್ರಂಥಾಲಯ, ವಿಶಾಲವಾದ ಆಟದ ಮೈದಾನ, ಆರೋಗ್ಯಕರ ಶೌಚಾಲಯ, ಮುಂತಾದ ಸೌಲಭ್ಯಗಳಿದ್ದು ವಿದ್ಯಾರ್ಥಿಗಳಿಗೆ ಪೋಷಕಾಂಶಭರಿತ ಶುಚಿರುಚಿಯಾದ ಬಿಸಿಯೂಟ, ಮೊಟ್ಟೆ, ಬಾಳೆಹಣ್ಣು ವಿತರಿಸಲಾಗುತ್ತದೆ. ವಿದ್ಯಾರ್ಥಿಗಳಿಗೆ ಪಾಠಗಳನ್ನು ಆಧುನಿಕ ತಂತ್ರಜ್ಞಾನ ಉಪಯೋಗಿಸಿ ಬೋಧಿಸಲಾಗುತ್ತಿದೆ. ಪಾಠದಲ್ಲಿ ಮಾತ್ರವಲ್ಲದೆ ಕಲಾ, ಕ್ರೀಡಾ, ವೃತ್ತಿ ಪರಿಚಯ ಮೇಳಗಳಲ್ಲಿ ರಾಜ್ಯ ಮಟ್ಟದಲ್ಲಿ ಹೆಸರು ಗಳಿಸಿದ ಕೀರ್ತಿ ನಮ್ಮ ಸ್ನೇಹಿತರದ್ದು. ಮಗುವನ್ನು ದೈಹಿಕ, ಮಾನಸಿಕ, ಬೌದ್ಧಿಕ, ಭಾವನಾತ್ಮಕ, ನೈತಿಕ, ಸಾಮಾಜಿಕವಾಗಿ ಸಮರ್ಥ ಸದೃಢರನ್ನಾಗಿಸುವುದೇ ಪೈವಳಿಕೆನಗರ ಶಾಲೆಯ ಧ್ಯೇಯವಾಗಿದೆ. ಪೈವಳಿಕೆನಗರ ಶಾಲೆಯಲ್ಲಿ ವಿವಿಧ ಕ್ಲಬ್ ಗಳು ಕಾರ್ಯಾಚರಿಸುತ್ತಿದ್ದು ವಿದ್ಯಾರ್ಥಿಗಳ ಸುಪ್ತ ಪ್ರತಿಭೆಗೆ ವೇದಿಕೆ ಒದಗಿಸುತ್ತವೆ. ಕನ್ನಡ ಸಾಹಿತ್ಯ ಸಂಘದ ವಾರಪತ್ರಿಕೆ ಪ್ರತಿಭಾ ತರಂಗ, ಗಣಿತ ಸಂಘದ ವಿಸ್ಮಯ ಇವುಗಳಲ್ಲಿ ಕೆಲವು.

ಪೈವಳಿಕೆನಗರ ಶಾಲೆಯ ಒಂದು ಸಿಂಹಾವಲೋಕನವನ್ನು ಈ ಹೊತ್ತಗೆಯ ಮೂಲಕ ಮಾಡುವ ಪ್ರಯತ್ನ ಮಾಡಿದ್ದೇವೆ. ಲೋಪ ದೋಷಗಳನ್ನು ಮನ್ನಿಸಿ ಸಕಾರಾತ್ಮಕ ವಿಮರ್ಶೆಯೊಂದಿಗೆ ಆಶೀರ್ವದಿಸಬೇಕಾಗಿ ತಮ್ಮಲ್ಲಿ ಕಳಕಳಿಯ ವಿನಂತಿ.

**ಮುಖ್ಯ ಸಂಪಾದಕರು**

**ಪ್ರತಿಧ್ವನಿ**

**<u>ಅಂದದ ಹೂ</u>**

ಹೂವಿನ ಅಂದ

ಬಲು ಚಂದ

ಎಲ್ಲರ ಮನಸಿಗೆ

ಆನಂದ.

ಚಿಟ್ಟೆಯಣ್ಣ ಬಂದ

ಹೀರಿದ ಮಕರಂದ

ಸಿಹಿ ಕುಡಿದು ಆಯಿತು

ಪರಮಾನಂದ

ಹೂವಣ್ಣ ಅಂದ

ತುಂಬ ಖುಷಿಯಿಂದ

ನನ್ನ ಪ್ರೀತಿಯ ಕಂದ

ಸಂತಸದ ದಿನವೆಂದ.

ಧನ್ಯಶ್ರೀ.ಪಿ

7.ಸಿ ತರಗತಿ.

# ಒಗಟು

1. ಬಂಗಾರವನ್ನು ಎಸೆದು ಬೆಳ್ಳಿಯನ್ನು ನುಂಗುತ್ತಾರೆ.

2. ಬಾಲವಿದೆ ಪ್ರಾಣಿಯಲ್ಲ, ಹಾರಾಡುವುದು ಹಕ್ಕಿಯಲ್ಲ.ಹಾಗಾದರೆ ನಾನು ಯಾರು?

3. ಚಿಕ್ಕ ಬಾಗಿಲಿಗೆ ಬಂಗಾರದ ಬೀಗ.

4. ಈ ಬಿಲ್ಲಿಗೆ ಬಾಣವನ್ನು ಹೂಡಲು ಆಗುವುದಿಲ್ಲ.

5. ನೂರಾರು ದನಗಳಿಗೆ ಒಂದೇ ಬಾಲ. ಹಾಗಾದರೆ ನಾನು ಯಾರು?

ಉತ್ತರಗಳು.

1.ಬಾಳೆಹಣ್ಣು

2. ಗಾಳಿಪಟ

3.ಮೂಗುತಿ

4.ಕಾಮನಬಿಲ್ಲು

5.ಬಾಳೆಗೊನೆ

ಸಂಗ್ರಹ

ಅಭಿರಾಮ.ಕೆ

7 ಸಿ.

## ಒಗಟುಗಳು

೧.ಅಜ್ಜಿಯ ಮೈಮೇಲೆ ಕಜ್ಜಿ ಕಜ್ಜಿ

೨.ಗಿಡದ ಮೇಲೆ ಕಾಯಿ.ಕಾಯಿ ಮೇಲೆ ಗಿಡ

೩.ಮುಳ್ಳಿನ ಗಿಡದಲ್ಲಿ ಚಿನ್ನದ ಮೊಟ್ಟೆ

೪.ಹಸಿರು ಗಿಡದಲ್ಲಿ ಮೊಸರು ಚೆಲ್ಲಿದೆ

೫.ಕುಪ್ಪಳಿಸುತ್ತೇನೆ ಕಂಗಾರು ಅಲ್ಲ.ಹಾಡುತ್ತೇನೆ ಕೋಗಿಲೆಯಲ್ಲ.ಈಜಾಡುತ್ತೇನೆ ಮೀನು ಅಲ್ಲ.ಹಾಗಾದರೆ ನಾನು ಯಾರು?

೬.ಕಪ್ಪು ಮೈ,ಉದ್ದ ಬಾಲ,, ಅಗೆದು ಬಿಲವನು ಕೊರೆಯುವೆ.ಬೆಕ್ಕು ಬರಲು ಮೆಲ್ಲ ಬಂದು ಮಿಂಚಿನಂತೆ ಹಾರುವೆ.ಹಾಗಾದರೆ ನಾನು ಯಾರು?

೭.ಡುಮ್ಮಿ ಹುಡುಗಿ ಸಿಲ್ಕ್ ಸಾರಿ ಉಟ್ಟಿದ್ದಾಳೆ.

೮.ಕೂಗಿದರೆ ರಾವಣ.ಹಾರಿದರೆ ಹನುಮಂತ.ಕುಳಿತರೆ ಮುನಿ.

೯.ಎಷ್ಟು ಕಡಿದರೂ ತುಂಡಾಗುವುದಿಲ್ಲ.

೧೦.ಕಣ್ಣಿಗೆ ಕಾಣುವುದಿಲ್ಲ.ಕೈಗೆ ಸಿಗುವುದಿಲ್ಲ.ಇದು ಇಲ್ಲದಿದ್ದರೆ ನಾವಿಲ್ಲ.

ಉತ್ತರಗಳು.

೧ ಹಾಗಲಕಾಯಿ

೨ ಅನನಾಸು

೩ ಲಿಂಬೆ

೪ ಮಲ್ಲಿಗೆ

೫ ಕಪ್ಪೆ

೬.ಇಲಿ

೭.ಈರುಳ್ಳಿ

೮ ಕಪ್ಪೆ

೯ ನೀರು

೧೦ ಗಾಳಿ

ಸಂಗ್ರಹ

ಅನನ್ಯ.೬ ಸ

**My Lovely Teacher**

She is my mom too who
Taught me good deeds
She is the one who showed
Me the right path.
She really deserves the
Title of mom.
She is the coolest person,
Who hugs me too.
She is so kind even
If I do mistake
She taught me hygenic
And punctuals too.
I wish I could be
Like her.

Collection

Fathimath Hafeeda
6 C.

# <u>ಅಮ್ಮ</u>

ಅಮ್ಮ ನನ್ನ ಮುದ್ದಮ್ಮ

ಪ್ರೀತಿಯ ರೂಪವೇ ನೀನಮ್ಮ

ಬಾಳುವ ದೇವ ನೀನಮ್ಮ

ನನ್ನ ವಂದನೆ ನಿನಗಮ್ಮ

ತಪ್ಪನು ತಿದ್ದುವ ಗುರು ನೀ

ನನ್ನ ಹೆತ್ತ ಅಮ್ಮ ನೀ

ನನ್ನ ಬೆಳೆಸಿದ ತಾಯಿ ನೀ

ನನ್ನ ವಂದನೆ ನಿನಗಮ್ಮ

(ಸರ್ವಾಣಿ 7ಎ)

# <u>ನಿತ್ಯಕರ್ಮ</u>

ಬೆಳಗ್ಗೆ ಎದ್ದು ಹಲ್ಲು ಉಜ್ಜಿ

ನಿತ್ಯಕರ್ಮ ಮುಗಿಸುವೆ

ಬಸ್ಸು ಹತ್ತಿ ಶಾಲೆ ತಲುಪಿ

ಪಾಠ ಆಟ ಕಲಿಯುವೆ

ಸಂಜೆ ಬಂದು ತಿಂಡಿ ತಿಂದು

ಮನೆಕೆಲಸ ಮಾಡುವೆ

ಊಟ ಮಾಡಿ ನೀರು ಕುಡಿದು

ರಾತ್ರಿ ಪೂರಾ ಮಲಗುವೆ

ಕನಸಿನಲ್ಲಿ ರಾಜ ರಾಣಿ

ಎಂಬ ಕಥೆ ಕಾಣುವೆ

ಮನವ ತುಂಬಿ ಮಾತನಾಡಿ

ನಗುತ ಮೈ ಮರೆಯುವೆ

(ಧನ್ಯಶ್ರೀ ಪಿ 7ಸಿ)

## ನಮ್ಮ ಮಕ್ಕಳು

ಭಾರತ ದೇಶದ ಮಕ್ಕಳು ನಾವು

ನಾವೆಲ್ಲರೂ ಒಂದೇ

ದ್ವೇಷ ಅಸೂಯೆಯ ಮಾಡೆವು ನಾವು

ನಮ್ಮಯ ಧ್ಯೇಯವು ಒಂದೇ

ಗಾಳಿ ಬೆಳಕು ನೀರಿನಂತೆ

ಸೇವೆ ನಮ್ಮ ರೀತಿಯ

ಸೂರ್ಯ ಚಂದ್ರ ಇರುವ ಹಾಗೆ

ಬೆಳಗುವೆವು ಭುವಿಯೊಳು

ಒಂದೇ ನೆಲ ಒಂದೇ ಜಲ

ದೇಶ ಒಂದೇ ನಮಗೆ

ಜಾತಿ ಕುಲ ಧರ್ಮ ಭೇಧ ಭಾವ

ಎನಿತು ಇಲ್ಲ ಹಾಗೆ

ಕಷ್ಟ ದುಖ ಏನೇ ಬರಲಿ

ಗುರಿಮುಟ್ಟುವೆವು ನಾವು

ದೇಶ ಸೇವೆ ನಮ್ಮ ಗುರಿಯು

ಒಗ್ಗಟ್ಟಿರಲಿ ನಮ್ಮೊಳು

(ಮಂಜೂಷ 7ಎ)

# ದುಡಿಮೆ

ಹಾರೆಯು ಹೆಗಲಲಿ

ಕತ್ತಿಯು ಕೈಯಲಿ

ಬಂದನು ಬಂದನು ಹೊಲದ ಕಡೆ

ಎತ್ತಿನ ಜೊತೆಯಲಿ

ಹುಣಿಯ ಮೇಲ್ಗಡೆ

ಬಂದನು ಬಂದನು ಹೊಲದ ಕಡೆ

ಅನ್ನವ ನೀಡುವ

ಧರ್ಮವ ಮಾಡುತ

ಬಂದನು ಬಂದನು ಹೊಲದ ಕಡೆ

ದುಡಿಯಲು ಗದ್ದೆಗೆ

ಜೀವನ ನೂಕಲು

ಬಂದನು ಬಂದನು ಹೊಲದ ಕಡೆ

ಹಸಿವನು ನೀಗುತ

ಬೆವರನು ಸುರಿಸುತ

ಬಂದನು ಬಂದನು ಹೊಲದ ಕಡೆ

(ಕೆ ಶಿವಾನಿ 6ಎ ತರಗತಿ)

# ಹೂವುಗಳೆಡೆಯಲ್ಲಿ

ಹೂವುಗಳೆಡೆಯಲಿ ಹಾರುತ ನಾನು

ಚಿಟ್ಟೆಯಾದೆನು

ಹೂವಿನ ಪರಿಮಳ

ಹೀರುತ ನಾನು

ಸಂತಸಗೊಂಡೆನು.

ಕುಣಿಯುತ ನಲಿಯುತ

ಹಾಡುತ ನಾನು

ಹಾರಿಯೆ ಬಿಟ್ಟೆನು

ಹೂವಿನ ಎಸಳಿನ

ಒಳಗಡೆ ಅವಿತು

ಕಣ್ಮರೆಯಾದೆನು.

✍ ಪೂಜಾಶ್ರೀ 7 .ಸಿ

## ಛಲ

ಇರುವುದು ಛಲವು

ನನ್ನಯ ಗುರಿಯು

ಎಲ್ಲರಿಗಿಂತ ಬಲವು

ಅದುವೇ ಎಲ್ಲವು...

ಎಂದಿಗೂ ಸೋಲೆನು

ತಪ್ಪನು ಮಾಡೆನು

ಹಠವನು ಹಿಡಿದು

ಪ್ರಯತ್ನವ ಮಾಡುವೆನು.

ಸೋಲೆಂಬ ಪದಕೆ

ಅರ್ಥವು ಇಲ್ಲ..

ಗೆಲುವಿನ ಖುಷಿಗೆ

' ಮೇರೆ' ಯು ಇಲ್ಲ

✍ ಧನ್ಯಶ್ರೀ 7 ಸಿ

# ತಂಗಾಳಿ

ಬಿಸಿಯನು ಮಣಿಸಿದೆ

ಬೀಸುವ ತಂಗಾಳಿ

ತನುವನು ತಣಿಸಿದೆ

ಸೂಸುವ ತಂಗಾಳಿ

ತರುವಿನ ಕೊಡೆಯಲಿ

ನೆರಳನು ನೀಡಿದೆ

ಕುಸುಮದ ನಗೆಯಲಿ

ಗಂಧವ ಹರಡಿದೆ

ಭೇದವ ಎಣಿಸದೆ

ಆಸರೆ ನೀಡಿದೆ

ಬಳಲಿದ ಜೀವನ

ಬೇಸರ ಕಳೆದಿದೆ

ಹೆಜ್ಜೆಯ ನಾದವು

ಗೆಜ್ಜೆಯ ಹಾಗಿದೆ

ತಣ್ಣನೆ ಸ್ಪರ್ಶವು

ಬೆಣ್ಣೆಯ ಹಾಗಿದೆ.

✍ ಆಯಿಷತ್ ಸಹಲ ಕೆ

## ಮಳೆಗಾಲದ ಒಂದು ದಿನ

ಎರಡು ತಿಂಗಳು ರಜೆ ಆರಂಭವಾಗಿ ಮುಗಿಯಲು ಮಳೆಯೂ ಆರಂಭವಾಯಿತು.ರೈತರು ಖುಷಿಯಿಂದ ಹೊಲದ ಕಡೆ ನಡೆದರು.ಕಪ್ಪಗಳ ಶಬ್ದ, ನವಿಲಿನ ನಾಟ್ಯ ರೈತರ ಮನಸ್ಸಿಗೆ ಖುಷಿ ನೀಡಿತು.ಹೊಳೆ ಉಕ್ಕಿಹರಿದು ಗಿಡ ಮರಗಳು ಚಿಗುರಿದುವು..ಆದರೆ ಮಳೆರಾಯ ತುಂಬಾ ಜೋರೆಂದು ತಿಳಿದದ್ದು ಈ ವರುಷವೇ..ಟಿ.ವಿಯಲ್ಲಿ ಪ್ರಳಯದ ದೃಶ್ಯ ನಿಜಕ್ಕೂ ನನ್ನ ಮನಸ್ಸಿನಲ್ಲಿ ಭಯ ಮೂಡಿಸಿದೆ!

✍ ಕೆ.ಶಿವಾನಿ 6.ಎ

## School Library

Books are friends of lonely mind.Reading is a good habit.we have to develop reading as a habit.Books are informative as well entertaining.The house of books known as Library.A library is essential in a school.Children can collect good books from library.They collect various informations from books.So all of us should and must develop ' reading habit ' ourselves.

Ayshath sahla K 5 A✍ •

**ಗಾಳಿಪಟ**

ಬಾನಲಿ ಹಾರುವ ಗಾಳಿಪಟ

ನಾನು ಮಾಡಿದ

ಗಾಳಿಪಟ

ಹಲವು ಬಣ್ಣದ

ಗಾಳಿಪಟ

ಸರಸರ ಹಾರುವ

ಗಾಳಿಪಟ

ಬಾನಲಿ ಹಾರುವ

ಗಾಳಿಪಟ

ನಾನು ಮಾಡಿದ

ಗಾಳಿಪಟ

✍ ಆಯಿಶತ್ ರಾಶಿದ 7.ಸಿ

## ದುಡಿಮೆ

ನೆಲವನು ನಾವು

ಅಗೆಯುವ

ಬೀಜವನು ನಾವು

ಬಿತ್ತುವ

ನೀರನು ಹೊತ್ತು

ಹೊಯ್ಯುವ

ಗೊಬ್ಬರವನು ನಾವು

ಹಾಕುವ

ಕಳೆಯನು ಮರೆಯದೆ

ಕೀಳುವ

' ಬೆಳೆ' ಗಳ ಖುಷಿಯಲಿ

ಕೊಯ್ಯುವ

ಬುಟ್ಟಿಯಲಿ ಮನೆಗೆ

ಒಯ್ಯುವ

✍ ಆಯಿಷತ್ ರಾಶಿದ 7 ಸಿ

# <u>ನಮ್ಮ ಶಾಲೆ</u>

ನಮ್ಮ ಶಾಲೆ

ಪೈವಳಿಕೆ...

ಅಲ್ಲಿಯೇ

ನಮ್ಮ ಕಲಿಕೆ

ಇದುವೇ ನಮ್ಮ

ಹೆಗ್ಗಳಿಕೆ

ವಿವಿಧ ವಿಷಯಗಳ

'ಗಳಿಕೆ'.

ಆಡಲು ಇರುವುದು

ಮೈದಾನ

ಎಲ್ಲ 'ಆಟ'ಗಳ ಪ್ರತಿದಿನ

ಆಗುವುದು ನಮ್ಮದು

ಖುಷಿಯ 'ಮನ'

ಶಾಲೆಗೆ ಬರಲು ಅನುದಿನ..

ಧನ್ಯಶ್ರೀ 7 ಸಿ

# <u>ಚಿಟ್ಟೆ</u>

ಚಿಟ್ಟೆ ಚಿಟ್ಟೆ

ಚಂದದ ಚಿಟ್ಟೆ

ಚಿಟ್ಟೆ ಚಿಟ್ಟೆ

ಅಂದದ ಚಿಟ್ಟೆ

'ಮಧ್ಯವರ್ತಿ'

ಆಗುವ ಚಿಟ್ಟೆ

ಪರಾಗಸ್ಪರ್ಷ

ಸಹಾಯಕ ಚಿಟ್ಟೆ

ಚಿಟ್ಟೆ ಚಿಟ್ಟೆ

ಹಾರುವ ಚಿಟ್ಟೆ

ಚಿಟ್ಟೆ ಚಿಟ್ಟೆ

ಬಣ್ಣದ ಚಿಟ್ಟೆ

ಅನನ್ಯ 6 ಸಿ.

# <u>ಗಿಳಿ</u>

ಗಿಳಿಯೇ ಗಿಳಿಯೇ

ಹಸುರಿನ ಗಿಳಿಯೇ

ನಾನು ಕರೆದರೆ

ಬರುವೆಯಾ ಗಿಳಿಯೇ?

ಬಂದರೆ ನೀನು

ಕೊಡುವೆನು ನಾನು

ತಡ ಮಾಡದೆ

ಕೆಂಪಿನ ಮೆಣಸನು

ಗಿಳಿಯೇ ಗಿಳಿಯೇ

ಕೆಂಪು ಕೊಕ್ಕಿನ ಗಿಳಿಯೇ.

ಧನ್ಯಶ್ರೀ 7 ಸಿ

# <u>ಕಲಿಕೆ</u>

ಓದಿದ ಪಾಠವ

ಮರೆಯಲಾರೆ..

ಕೆಟ್ಟವರ ಮಾತನು

ಕೇಳಲಾರೆ..

ತಪ್ಪು ದಾರಿಗೆ

ಇಳಿಯಲಾರೆ..

ಹೆದರಿ ಹಿಂದಕೆ

ಸಾಗಲಾರೆ...

ಎಂದಿಗೂ ಮೋಸ

ಮಾಡಲಾರೆ

ಆಲಸ್ಯವನ್ನು ನಾ

ಸಹಿಸಲಾರೆ..

ಕಷ್ಟವ ನೋಡಿ

ಸುಮ್ಮನಿರಲಾರೆ

'ಛಲ' ವನು ಬಿಟ್ಟು

ಎಂದಿಗೂ ಇರಲಾರೆ

ಧನ್ಯಶ್ರೀ 7ಸಿ

## SUN

When you rise up
I will get up.
When you get down
I will sleep.
When you come here
We get light
When you go there
We get dark
You are the sourse of light
You are the shining star.

Fathimath Ridha 7 C

## CRUELTY

How cruel human are we?
We need the shade
We need the fruits
We need the leaves
We need the wood.
But ,not the tree which gives it!
It's not less than cruelty,
To grab the goodness and throw the rest !!
How cruel human are we?

Fathimath Ridha 7 c

# ಕ್ವಿಜ್

1.ಭಾರತದ ಉಕ್ಕಿನ ಮನುಷ್ಯ ಯಾರು?

ಸರ್ದಾರ್ ವಲ್ಲಭಭಾಯಿ ಪಟೇಲ್

2.ಸ್ವರಾಜ್ಯವೇ ನನ್ನ ಜನ್ಮಸಿದ್ಧ ಹಕ್ಕು ಎಂದು ಹೇಳಿದವರು ಯಾರು?

ಬಾಲಗಂಗಾಧರ ತಿಲಕ.

3.ಕೆಂಪು ಕೋಟೆ ಎಲ್ಲಿದೆ?

ದೆಹಲಿ.

4.ಭಾರತದ ಈಗಿನ ಪ್ರಧಾನ ಮಂತ್ರಿ ಯಾರು?

ನರೇಂದ್ರ ಮೋದಿ.

5 ಕೇರಳದ ಈಗಿನ ಮುಖ್ಯಮಂತ್ರಿ ಯಾರು?

ಪಿಣರಾಯಿ ವಿಜಯನ್.

6.ತ್ರಿವರ್ಣ ಧ್ವಜದ ಮೂರು ಬಣ್ಣಗಳು ಏನನ್ನು ಸೂಚಿಸುತ್ತವೆ?

ಕೇಸರಿ - ತ್ಯಾಗ

ಬಿಳಿ - ಶಾಂತಿ

ಹಸಿರು - ಸಮೃದ್ಧಿ.

7 ನಮ್ಮ ದೇಶದಲ್ಲಿ ಎಷ್ಟು ರಾಜ್ಯಗಳಿವೆ?

29.

8.ಹೊಸದಾಗಿ ರೂಪಿಸಲ್ಪಟ್ಟ ರಾಜ್ಯ ಯಾವುದು?

ತೆಲಂಗಾಣ.

9.ಡಾ.ಎ.ಪಿ.ಜೆ ಅಬ್ದುಲ್ ಕಲಾಂರವರ ಆತ್ಮ ಕತೆಯ ಹೆಸರೇನು?

ಅಗ್ನಿ ರೆಕ್ಕೆಗಳು.

10.ಸೌರವ್ಯೂಹದಲ್ಲಿರುವ ಗ್ರಹಗಳ ಸಂಖ್ಯೆ ಎಷ್ಟು?

8 ಗ್ರಹಗಳು.

ಕೆ.ಶಿವಾನಿ 6 ಎ.

# ಶಾಲೆ

ಎಷ್ಟು ಸುಂದರ ಶಾಲೆಯು

ನಮ್ಮಯ ಸುಂದರ

ಶಾಲೆಯು

ಪಾಠ ಓದಲಿರುವ

ಶಾಲೆಯು

ಬರೆದು,ಆಡಲಿರುವ

ಶಾಲೆಯು

ಸ್ವಚ್ಛತೆಯಿಂದ ಇರುವ

ಶಾಲೆಯು

ನಮ್ಮ ಸುಂದರ ಶಾಲೆಯು.

ಶಾರ್ವಿ.ಒಸಿ

## ದೇಶ

ನಮ್ಮ ದೇಶ ಭಾರತ

ನಮ್ಮ ನಾಡು ಭಾರತ

ನಮ್ಮ ಹುಟ್ಟು ಇಲ್ಲಿಯೇ

ನಮ್ಮ ಮನೆಯು ಇಲ್ಲಿಯೇ..

ಭೇದಗಳನ್ನು ಮರೆಯುವ

ಒಂದೇ ಮನಸಲಿ ಬೆರೆಯುವ

ಕಷ್ಟ ಬಂದರೆ ಸಹಿಸುವ

ನಮ್ಮ ದೇಶ ಭಾರತ.

ಭವ್ಯ.ಎಸ್ ೭.ಸಿ

# ಗಾದೆಗಳು

೧.ಕೈ ಕೆಸರಾದರೆ ಬಾಯಿ ಮೊಸರು.

೨.ಕಾಯಕವೇ ಕೈಲಾಸ.

೩.ಉಪ್ಪಿಗಿಂತ ರುಚಿ ಇಲ್ಲ ತಾಯಿಗಿಂತ ಬಂಧು ಇಲ್ಲ.

೪.ಮುತ್ತಿಗಿಂತ ಹೊತ್ತು ಮೇಲು.

೫.ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗಿತೇ?

6.ಹಣ ಕಂಡರೆ ಹೆಣ ಬಾಯಿ ಬಿಡುತ್ತದೆ.

೭.ಊರಿಗೆ ಅರಸನಾದರೂ ತಾಯಿಗೆ ಮಗ.

೮.ಮಾತು ಬೆಳ್ಳಿ ಮೌನ ಬಂಗಾರ.

೯.ಕಬ್ಬು ಡೊಂಕಾದರೆ ಸಿಹಿ ಡೊಂಕೆ?

೧೦.ಆನೆ ಕದ್ದರೂ ಕಳ್ಳ ಅಡಿಕೆ ಕದ್ದರೂ ಕಳ್ಳ.

ಸಂಗ್ರಹ ಕೆ.ಶಿವಾನಿ ೭ ಎ ತರಗತಿ

## ಅಮ್ಮ

ನನ್ನ ಅಮ್ಮ ಮುದ್ದು ಅಮ್ಮ

ಸ್ನೇಹ ಇರುವ ಪ್ರೀತಿಯ ಅಮ್ಮ

ಹಸಿದರೆ ಊಟ ಕೊಡುವ

ನನ್ನ ಅಮ್ಮ

ಕತೆಯ ಹೇಳುವ ನನ್ನ ಅಮ್ಮ.

ನನ್ನ ಅಮ್ಮ ಮುದ್ದು ಅಮ್ಮ.

ಆಯಿಷತ್ ಮುಝ್ಯಿನ ೫.ಸಿ

## ಗಾದೆ ಮಾತುಗಳು.

೧ ಹುಟ್ಟು ಗುಣ ಬೆಟ್ಟ ಹತ್ತಿದರೂ ಬಿಡುವುದಿಲ್ಲ.

೨.ಮಕ್ಕಳೇ ಮನೆಗೆ ಮಾಣಿಕ್ಯ.

೩.ಇಂದಿನ ಮಕ್ಕಳೇ ಮುಂದಿನ ಜನಾಂಗ.

೪.ಸತ್ಯಕ್ಕೆ ಸಾವಿಲ್ಲ.ಸುಳ್ಳಿಗೆ ಸುಖವಿಲ್ಲ.

೫.ಮನೆಗೊಂದು ಮರ ಊರಿಗೊಂದು ವನ.

೬.ವೇದ ಸುಳ್ಳಾದರೂ ಗಾದೆ ಸುಳ್ಳಾಗದು.

೭.ಮಾತು ಆಡಿದರೆ ಹೋಯ್ತು ಮುತ್ತು ಒಡೆದರೆ ಹೋಯ್ತು.

೮.ಅನ್ನದ ಮಹತ್ವ ಹಸಿದವನಿಗೆ ಮಾತ್ರ ಗೊತ್ತು.

೯.ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಮೇಲು

೧೦.ಹಣಕ್ಕಿಂತ ಗುಣ ಮುಖ್ಯ.

ಕಾವ್ಯ.೭.ಸಿ

## ಒಗಟುಗಳು

೧.ಅಡ್ಡ ಮರದಲ್ಲಿ ಬೊಡ್ಡ ಕುಳಿತಿದ್ದಾನೆ.

೨.ಅಂಗಣ್ಣ ಮಂಗಣ್ಣ ಅಂಗಿ ಬಿಚ್ಚಿ ಬಾವಿಗೆ ಹಾರಣ್ಣ.

೩.ಅಜ್ಜಿಯ ಮೈಯೆಲ್ಲಾ ಕಜ್ಜಿ.

೪.ಬಿಳಿ ಹುಡುಗನಿಗೆ ಕರಿ ಟೋಪಿ.

೫.ಚಿನ್ನವನ್ನು ಬಿಸಾಡುತ್ತಾರೆ ಬೆಳ್ಳಿಯನ್ನು ನುಂಗುತ್ತಾರೆ.

ಉತ್ತರ: ೧.ಹಲಸು ೨.ಬಾಳೆಹಣ್ಣು ೩.ಹಾಗಲ ೪.ಬೆಂಕಿ ಕಡ್ಡಿ ೫.ಬಾಳೆ ಹಣ್ಣು.

ಧನ್ಯಶ್ರೀ .ಪಿ ೭ ಸಿ

## ತುಂತುರು ಮಳೆ

ಗುಡುಗು ಗುಡುಗಿತು

ಮಿಂಚು ಮಿಂಚಿತು

ತುಂತುರು ಮಳೆ ಸುರಿಯಿತು.

ಗಾಳಿ ಬೀಸಿತು

ಮನವು ಸೆಳೆಯಿತು

ಕಣ್ಣಿಗಾನಂದ ನೀಡಿತು.

ಇಳೆಯು ತಣಿಯಿತು

ಬಾಯಾರಿಕೆ ನೀಗಿತು

ಖುಷಿಯಿಂದ ಬಾಳು ಮಿನುಗಿತು.

ಧನ್ಯಶ್ರೀ.ಪಿ ೭ ಸಿ

# ಜೀವನದಿ

ಬೆಟ್ಟದೆಡೆಯಿಂದ ಇಳಿದು

ಸೊಬಗನ್ನು ತಂದು

ಮನಸ್ಸನ್ನು ಗೆಲ್ಲುವ

ಜೀವನದಿ

ಅಕ್ಕರೆಯಿಂದ ಹರಿದು

ಬಂಡೆಗಳಿಗೆ ಬಡಿದು

ಜುಳು ಜುಳು ನಿನಾದದ

ಜೀವನದಿ

ಕಾವ್ಯ 7ಸಿ

# <u>ಯೋಧ</u>

ದೇಶವ ಕಾಯುವ ಯೋಧ..

ಅವ ದೇವರು ನಮಗೆ

ಸದಾ

ಮಾಡುವನು ಭಯಂಕರ

ಯುದ್ಧ

ಯಾವ ಕಾರ್ಯಕ್ಕೂ

ಸಿದ್ಧ

ದೇಶವ ಕಾಯುವ ಯೋಧ

ಅವ ದೇವರು ನಮಗೆ

ಸದಾ...

ರೀಮಾ ಡಿಸೋಜ ೭.ಸಿ

## <u>ಒಗಟುಗಳು</u>

೧.ಊರುಂಟು ಜನರಿಲ್ಲ,ರಸ್ತೆ ಉಂಟು ವಾಹನವಿಲ್ಲ ನದಿ ಉಂಟು ನೀರಿಲ್ಲ

೨.ನೀಲಿ ಕೆರೆಯಲ್ಲಿ ಬಿಳಿ ಮೀನು

೩.ಕಪ್ಪೆ ಮುಟ್ಟದ ಕೈಲಾಸದ ನೀರು

೪.ಹಿಡಿದರೆ ಹಿಡಿ ತುಂಬಾ ಬಿಟ್ಟರೆ ಮನೆ ತುಂಬಾ

೫.ಆಚೆ ಈಚೆ ಸುರಂಗ ಮಧ್ಯದಲ್ಲಿ ತಡೆಗೋಡೆ.

ಉತ್ತರಗಳು

೧.ಭೂಪಟ

೨.ನಕ್ಷತ್ರ

೩.ಎಳೆನೀರು

೪.ದೀಪ

೫.ಮೂಗು.

ರೀಮಾ ಡಿಸೋಜ ೭.ಸಿ

## ಕನ್ನಡ ತಾಯಿ

ಕನ್ನಡ ತಾಯಿಗೆ

ನಮೋ ನಮೋ

ಸರ ಸರ ಬರೆಯಲು

ಕಲಿಸುವ

ಸರಾಗವಾಗಿ ಓದಲು

ಕಲಿಸುವ

ಕನ್ನಡ ತಾಯಿಗೆ

ನಮೋ ನಮೋ

ಕಾವ್ಯಶ್ರೀ ಜಿ ಸಿ

**<u>ಭಾರತ ದೇಶ</u>**

ನಮ್ಮಯ

ದೇಶ

ಹೆಮ್ಮೆಯ

ದೇಶ

ಭಾರತ

ದೇಶ

' ಸಂಪತ್ತಿನ

ಕೋಶ.

ಎಲ್ಲರೂ

ಒಂದಾಗಿ

ಬಾಳುವ

ದೇಶ

ಅಭಿವೃದ್ಧಿಯ

ಪಥದಲಿ

ಸಾಗುವ

ದೇಶ

ನಮ್ಮಯ

ದೇಶ

' ಭಾರತ ದೇಶ'

ರೀಮಾ ಡಿಸೋಜ  ೭ ಸಿ

Are you sleeping?

Are you sleeping
Are you sleeping
Brother John
Brother John
Bells are ringing
Bells are ringing
Ding dong bell
Ding dong bell.

Sahada 6 C

# <u>ನುಡಿ ಮುತ್ತುಗಳು</u>

೧. ನಾವು ನಿಜವಾದ ಶಾಂತಿ ಬಯಸಿದ್ದೇ ಆದಲ್ಲಿ ನಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು. - ಮಹಾತ್ಮ ಗಾಂಧೀಜಿ.

೨.ಒಬ್ಬ ವ್ಯಕ್ಕಿಯನ್ನು ಸೋಲಿಸುವುದು ಸುಲಭ

ಆದರೆ ಆ ವ್ಯಕ್ತಿಯನ್ನು ಗೆಲ್ಲುವುದು ಬಹಳ ಕಷ್ಟ.

- ಎ.ಪಿ.ಜೆ ಅಬ್ದುಲ್ ಕಲಾಮ್.

ಎಲ್ಲವನ್ನು ಅರಿಯಬಹುದು.ಸಾವನ್ಮರಿಯಲಾಗದು.- ಅಲ್ಲಮ ಪ್ರಭು.

ಒಳ್ಳೆಯದನ್ನು ಮಾಡಿದರೆ ಸಾಲದು ಅದನ್ನು ಒಳ್ಳೆಯ ರೀತಿಯಿಂದ ಮಾಡಬೇಕು..ಚಾಣಕ್ಯ.

ಮನುಷ್ಯನನ್ನು

ತಿಳಿಯಬೇಕಾದರ ತುಸು ವೇಳೆ ಬೇ◌ಿನ

Shivani 6

## ಗಾದೆಗಳು

೧.ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಮೇಲು.

೨.ತಾಳಿದವನು ಬಾಳಿಯಾನು.

೩.ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ.

೪.ಕೈ ಕೆಸರಾದರೆ ಬಾಯಿ ಮೊಸರು.

೫.ಮುತ್ತಿಗಿಂತ ಹೊತ್ತು ಮೇಲು.

೬. ಯಶಸ್ಸಿನ ರಹಸ್ಯವು ಅನೇಕರಿಗೆ ರಹಸ್ಯವಾಗಿಯೇ ಇರುತ್ತದೆ.

೭.ಯಾವಾಗಲೂ ಮಾತೇ ನಿಜವಾದ ಅಲಂಕಾರ.

೮ ಮಾತು ಬೆಳ್ಳಿ ಮೌನ ಬಂಗಾರ.

ಕಾವ್ಯ.೭ ಸಿ

<u>ಒಗಟುಗಳು</u>

೧.ಸಂಜೆಯಾಗುತ್ತಲೇ ಮನೆಗೆ ಬಂದ.ಬಾಯಲ್ಲಿ ಬಂದುದನ್ನು ಹಾಡಿದ, ಎಲ್ಲರ ರಕ್ತವನ್ನು ಹೀರಿದ.

೨ ನೋಡಲು ಬಿಳಿ.ತಿಂದರೆ ಬಾಯೆಲ್ಲಾ ಕೆಂಪು.

೩.ಅಂಗಿ ತೆಗೆದು ಬಾವಿಗೆ ಹಾರಿದರೆ ನಾನ್ಯಾರು?

೪.ಕಂಬದ ಮೇಲೆ ಕಪ್ಪು ಚೆಂಡು.

೫.ಹಸಿರು ಗಿಡದ ಮೇಲೆ ಮೊಸರು ಚೆಲ್ಲಿದೆ.

ಉತ್ತರ: ೧.ಸೊಳ್ಳೆ ೨.ಸುಣ್ಣ ೩.ಬಾಳೆ ಹಣ್ಣು ೪.ಲವಂಗ ೫ ಮಲ್ಲಿಗೆ.

ಮುಬಾರಕ್.೭ ಸಿ

# ನನಗುಂಟು

ಕಣ್ಣುಗಳೆರಡು ನನಗುಂಟು

ಸುತ್ತಮುತ್ತ ನೋಡಲು

ಕಿವಿಗಳೆರಡು ನನಗುಂಟು

ಎಲ್ಲಾ ಶಬ್ದ ಕೇಳಲು

ಮೂಗೊಂದು ನನಗುಂಟು

ವಾಸನೆಯನ್ನು ತಿಳಿಯಲು

ಕಾಲುಗಳೆರಡು ನನಗುಂಟು

ವೇಗವಾಗಿ ಓಡಲು

ಕೈಗಳೆರಡು ನನಗುಂಟು

ಕೆಲಸವನ್ನು ಮಾಡಲು

ಬಾಯಿಯೊಂದು ನನಗುಂಟು

ಒಳ್ಳೆಯ ಮಾತನು ಆಡಲು.

ಮಂಜೂಷ.ಪಿ ೭ ಸಿ

## ತೋಟ

ನಮ್ಮ ಶಾಲೆಯ

ತೋಟದಲ್ಲಿ

ಹಸಿರು ಎಲೆಗಳ

ನಡುವಲ್ಲಿ

ನೀಲಿ ಹೂವಿದೆ

ನೋಡಲ್ಲಿ.

ಕಂದು ಇರುವೆ ನೆಲದಲ್ಲಿ ಕೇಸರಿ ಹೂವು ಗಿಡದಲ್ಲಿ

ಗುಲಾಬಿ ಜೊತೆಗೆ ವನದಲ್ಲಿ

ಬಿಳಿಯ ಮಲ್ಲಿಗೆ ನಗುಚೆಲ್ಲಿ

ಹಳದಿ ಸಂಪಿಗೆ ಮರದಲ್ಲಿ

ಕಪ್ಪು ಕಾಗೆ ನೋಡಲ್ಲಿ

ಮಂಜೂಷ.ಪಿ ೭ ಸಿ

## ಕ್ವಿಜ್

೧.ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ ಸಂದರ್ಭದಲ್ಲಿ ಇಂಗ್ಲೆಂಡಿನ ಪ್ರಧಾನಮಂತ್ರಿ ಯಾರಾಗಿದ್ದರು?

೨.'ಗಡಿನಾಡ ಗಾಂಧಿ' ಯಾರು?

೩.ಐ.ಪಿ.ಯಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮೊದಲ ಭಾರತೀಯ ಯಾರು?

೪.ನಮ್ಮ ' ರಾಷ್ಟ್ರಪಿತ' ಯಾರು?

೫.ನಮ್ಮ ದೇಶದ ಮೊದಲ ಪ್ರಧಾನಿ ಯಾರು?

ಉತ್ತರಗಳು

೧.ಕ್ಲೆಮಂಡ್ ಅಟ್ಲಿ

೨.ಖಾನ್ ಅಬ್ದುಲ್ ಗಫೂರ್ ಖಾನ್.

೩.ಸತ್ಯೇಂದ್ರನಾಥ ಟಾಗೋರ್.

೪. ಮಹಾತ್ಮ ಗಾಂಧೀಜಿ.

೫.ಜವಹರಲಾಲ್ ನೆಹರು.

ಧನ್ಯಶ್ರೀ .ಪಿ ೭.ಸಿ

## ಜಂಭದ ಗೆಳೆಯರು

ಒಂದಾನೊಂದು ಊರಿನಲ್ಲಿ ಇಬ್ಬರು ಹುಡುಗರಿದ್ದರು. ಒಬ್ಬನ ಹೆಸರು ರಾಜು. ಇನ್ನೊಬ್ಬ ದಿನೇಶ್, ಅವರಿಬ್ಬರು ತುಂಬಾ ಸ್ನೇಹಿತರಾಗಿದ್ದರು. ಇಬ್ಬರೂ ಬಡವರಾಗಿದ್ದರು. ಒಂದು ದಿನ ಇಬ್ಬರೂ ಮಾವಿನಹಣ್ಣಿಗಾಗಿ ಕಾಡಿಗೆ ಹೋದರು. ತುಂಬಾ ದೂರ ನಡೆದಾಗ ಅವರಿಗೆ ದಿಗಿಲು ಉಂಟಾಯಿತು. ಯಾಕೆಂದರೆ ಅಲ್ಲಿ ಪ್ರಾಣಿಗಳ ಘರ್ಜನೆ ಕೇಳಿಸುತ್ತಿತ್ತು. ಅಲ್ಲಿಂದ ಪಾರಾಗಿ ಮತ್ತೂ ನಡೆದಾಗ ಜುಳುಜುಳು ನೀರಿನ ದನಿ ಕೇಳಿಸುತ್ತಿತ್ತು. ಅದನ್ನು ಕೇಳಿದಾಗ ಅವರಿಗೆ ಬಾಯಾರಿತು. ನೀರಿನ ಝುರಿಯ ಬಳಿ ಹೋಗಿ ನೀರನ್ನು ಕುಡಿದು ಬಾಯಾರಿಕೆ ನೀಗಿಸಿದರು. ಅಲ್ಲಿ ಸ್ವಲ್ಪ ದಣಿವಾರಿಸಿ ಮುಂದೆ ನಡೆದಾಗ ಅವರಿಗೆ ಒಂದು ಹುಲಿ ಎದುರಾಯಿತು. ಅದನ್ನು ಕಂಡು ಅವರಿಬ್ಬರೂ ಹೆದರಿ ಓಡಿದರು. ಇದನ್ನು ಕಂಡ ಹುಲಿಯು ಅವರನ್ನು ಬೆನ್ನಟ್ಟಿತು. ಅವರು ಓಡಿ ಹೋಗಿ ಊರನ್ನು ತಲುಪಿದರು. ಕಾಡಿಗೆ ಭಂಡ ಧೈರ್ಯದಿಂದ ಹೋಗಿ ಬರುವಾಗ ಹೆದರಿ ಬಂದಿದ್ದರು.(ಮನೀಶ್ 8ಸಿ)

## ತಾಯಿಯೇ ನಮ್ಮ ಧೈರ್ಯ

ಎಲ್ಲರಿಗಿಂತಲೂ ಹೆಚ್ಚಾಗಿ ನಮ್ಮನ್ನು ತಿಳಿದುಕೊಂಡಿರುವುದು ನಮ್ಮ ತಾಯಿ. ನಮಗಾಗಿ ತುಂಬಾ ನೋವನ್ನನುಭವಿಸಿದ ತಾಯಿಯನ್ನು ನಾವು ಯಾವ ಕರುಣೆಯನ್ನೂ ತೋರದೆ ನಾವು ವೃದ್ಧಾಶ್ರಮಕ್ಕೆ ಕಳುಹಿಸುತ್ತಿರುವುದು ಘೋರ ದುರಂತವಾಗಿದೆ. ತಾಯಿಯ ಬೆಲೆ ನಮಗೆ ಗೊತ್ತಾಗಬೇಕಾದರೆ ನಾವು ಆಕೆಯಿಂದ ಕೆಲವು ಸಮಯ ದೂರ ಇರಬೇಕು. ನಮ್ಮ ಧಮನಿಗಳಲ್ಲಿ ಹರಿಯುವ ಪ್ರತಿಯೊಂದು ರಕ್ತದ ಹನಿಯೂ ನಮ್ಮ ತಾಯಿಯ ಹೆಸರನ್ನು ಹೇಳುತ್ತದೆ. ನಮ್ಮ ತಾಯಿ ನಮಗೆ ಭಾರವಲ್ಲ ಪ್ರೀತಿ ಧೈರ್ಯ ನಮ್ಮ ತಾಯಿಯಿಂದ ಸಿಗುವುದಾಗಿದೆ.(ಮರಿಯಮತ್ ಸುರಯ್ಯ 8ಸಿ)

# ಪ್ರಕೃತಿ

ಇದು ಒಂದು ಪ್ರಕೃತಿ

ಸೌಂದರ್ಯದ ಸಂಸ್ಕೃತಿ

ದೇವರು ಮಾಡಿದ ಅಲಂಕೃತಿ

ಪ್ರಕೃತಿ ಪ್ರಕೃತಿ ನಮ್ಮ ಪ್ರಕೃತಿ

ಹಸಿರು ಹಸಿರು  ಮರಗಳು

ನೀಲಿ ನೀಲಿ ಹನಿಗಳು

ಹಸಿರು ಹಸಿರು ಬೆಟ್ಟಗಳು

ಪ್ರಕೃತಿ ಪ್ರಕೃತಿ ನಮ್ಮ ಪ್ರಕೃತಿ

ಜೀವಿಗಳು ನೆಲದಲ್ಲಿ

ಮಕ್ಕಳೆಲ್ಲ ಪಾಠದಲ್ಲಿ

ಪಕ್ಷಿಗಳ ಕೂಗಿನಲ್ಲಿ

ಪ್ರಕೃತಿ ಪ್ರಕೃತಿ ನಮ್ಮ ಪ್ರಕೃತಿ

ಮಾನವನು ಮನೆಯಲ್ಲಿ

ಪಕ್ಷಿಗಳು ಗೂಡಿನಲ್ಲಿ

ನಾವಿರುವುದೇ ಮಣ್ಣಿನಲ್ಲಿ

ಪ್ರಕೃತಿ ಪ್ರಕೃತಿ ನಮ್ಮ ಪ್ರಕೃತಿ

(ರೋಯಿಸ್ಟನ್ ರೋಡ್ರಿಗಸ್ 8ಸಿ)

## ರೈತ

ರಾತ್ರಿ ಕಳೆಯಿತು

ಬೆಳಕು ಹರಿಯಿತು

ಹಕ್ಕಿ ಚಿಲಿಪಿಲಿ ಎಂದಿತು.

ತಂಗಳು ಗಂಜಿ ಉಂಡು ರೈತ

ನೇಗಿಲು ಹಿಡಿದು ಹೊಲಕೆ ಹೊರಟ

ಭತ್ತದ ಕೃಷಿ ಮಾಡಲು

ಬೆವರು ಸುರಿಸಿ ಕೆಲಸ ಮಾಡುತ

ಕಷ್ಟಪಟ್ಟು ದುಡಿಯುತ

ನೇಗಿಲ ಹಿಡಿದು ಉಳುವ ರೈತ

ಊರಿಗೆ ಉಪಕಾರ ಮಾಡುವ

ನೋವ ತಿಂದು ಅನ್ನವ ನೀಡಿ

ಹೆಂಡತಿ ಮಕ್ಕಳ ಸಾಕುವ

ನಮ್ಮ ದೇಶಕೆ ಅಕ್ಕಿ ಕೊಡುವ

ರೈತನೆ ನಮ್ಮ ಅನ್ನದಾತ

ಸಂಜೆ ತನಕ ಹೊಲದಲಿ ಇದ್ದು

ರಾತ್ರಿ ಮನೆಗೆ ತೆರಳುವ

(ಕಿಶೋರ್ ಕುಮಾರ್ 8ಡಿ)

## <u>ಅಕ್ಕರೆಯ ಅಕ್ಕ</u>

ಜೀವನವಿಡೀ ಅವಲಂಬನೆ ನೀನೇ
ನೀತಿ ಪಾಠವ ಕಲಿಸುವ ನೀನೇ
ಜೀವನವಿಡೀ ನನಗೆ ನೀನೇ ಆಸರೆ
ಎಲ್ಲರಿಗಿಂತ ಮಿಗಿಲೇ ನೀನು
ಸಮತೆ ಮಮತೆ ಕಲಿಸಿದ ನೀನು
ಒಲುಮೆ ವಿಶ್ವಾಸವನಿತ್ತ ನೀನು
ಭೇದ ಭಾವವನ್ನು ದೂರ ಮಾಡಿಸಿ
ಸಮಾನತೆಯ ಸವಿಯನ್ನು ತಿಳಿಸಿದ ನೀನು
ದಾನ ಧರ್ಮವನ್ನು ಮಾಡಲು ಪ್ರಚೋದನೆ ನೀಡಿದೆ
ತಪ್ಪು ದಾರಿಯಲ್ಲಿ ಹೋಗದೆ ಪ್ರಜ್ಞೆ ನೀಡಿದೆ
ಕೈತುತ್ತು ತಿನಿಸಿ ಹಸಿವನು ನೀಗಿಸಿದ ನೀನೇ
ನನಗೆ ಜೀವನದ ಹಾದಿಯನು ತೋರಿಸಿದ ಅಕ್ಕರೆಯ ಅಕ್ಕ ನೀನೇ
(ಖದೀಜತ್ ಶಮ್ನೀರು 8ಡಿ)

**<u>ಮಮತೆಯ ಸವಿ</u>**

ಅಮ್ಮ ಅಮ್ಮ ನನ್ನಮ್ಮ
ಅನ್ನ ನೀಡಿದ ಎನ್ನಮ್ಮ
ಲಾಲಿಯ ಹಾಡಿದ ಎನ್ನಮ್ಮ
ಎನ್ನನು ಬೆಳೆಸಿದ ಎನ್ನಮ್ಮ
ಬುದ್ಧಿಯ ಕಲಿಸುವ ಎನ್ನಮ್ಮ
ನೀತಿಯ ಕಲಿಸುವಳೆನಗಾಗಿ
ಕೇಳುತ ಕುಳಿತೆನು ನಿನಗಾಗಿ
ಅಮ್ಮಾ ಅಮ್ಮಾ ನನ್ನಮ್ಮ
ಉಡುಪನು ಕೊಡಿಸುವಳೆನ್ನಮ್ಮ
ಪಡೆದುಕೊಳ್ಳುವೆ ನಾನಮ್ಮ
ತಿಂಡಿಯ ಕೊಡಿಸುವಳೆನ್ನಮ್ಮ
ತಿನ್ನುತ ಕುಳಿತೆನು ನಾನಮ್ಮ
(ತನುಶ್ರೀ ಎನ್ 8ಡಿ)

ನಮ್ಮ ರೈತ
ಅನ್ನವ ಕೊಡುವ ರೈತ
ಉಳುವ ಯೋಗಿ ರೈತ
ತ್ಯಾಗಿ ಇವನುರೈತ
ಯೋಗಿ ಇವನು ರೈತ
ಉಕ್ಕಿನ ದೇಹದ ಧೀರನಿವ ರೈತ
ತಾಯಿಯ ಮನಸಿನ ಒಂದು ರೈತ
ಬಿಸಿಲಿಗೆ ಬೆದರದವನು ರೈತ
ಚಳಿಗೆ ನಡುಗದವ ರೈತ
ರೈತನು ಸಂತೋಷಪಟ್ಟರೆ
ಜಗಕ್ಕೂ ಸಂತೋಷ
ಲೋಕದ ಹಸಿವನ್ನು ತಣಿಸುವ
ದೇಶದ ಬೆನ್ನೆಲುಬಾಗಿದೆ ರೈತ

(ಫಾತಿಮತ್ ನೌಫ 8ಎ)

## ತೋಳ ಹಾಗೂ ಹಂದಿಮರಿ

ಒಂದಾನೊಂದು ಕಾಲದಲ್ಲಿ ಒಂದು ಕಾಡಿನಲ್ಲಿ ಹಂದಿ ಮತ್ತು ಅದರ ಮರಿ ವಾಸವಾಗಿತ್ತು. ಆ ಕಾಡಿನಲ್ಲಿ ಒಂದು ತೋಳವೂ ವಾಸವಾಗಿತ್ತು. ಹಂದಿಯು ತನ್ನ ಮರಿಯನ್ನು ಜೋಪಾನವಾಗಿ ಕಾಯುತ್ತಿತ್ತು. ಒಂದು ದಿನ ಹಂದಿ ಮರಿ ಕಾಡಿಗೆ ಆಹಾರಕ್ಕಾಗಿ ಹೋದಾಗ ತೋಳವು ಹಂದಿಯನ್ನು ತಿನ್ನುವ ಆಸೆಯಿಂದ ಮರಿಯನ್ನು ದೊಡ್ಡ ಬಂಡೆಯಲ್ಲಿಗೆ ಕರೆತಂದಿತು. ಬಂಡೆಯಿಂದ ದೂಡಿಹಾಕಿ ಕೊಲ್ಲಬಹುದೆಂದು ಆಲೋಚಿಸುತ್ತಿರುವಾಗಲೇ ತಾಯಿ ಹಂದಿ ಬಂದು ತೋಳವನ್ನು ದೂಡಿಹಾಕಿ ತನ್ನ ಮರಿಯನ್ನು ರಕ್ಷಿಸಿತು. ಹಂದಿ ಮತ್ತು ಮರಿ ಸಂತಸದಿಂದ ಮನೆಗೆ ಹಿಂತಿರುಗಿತು.(ಮನೀಶ್ ಎಸ್ 8ಸಿ)

## ಜಿಪುಣ ಸೋಮಣ್ಣ

ಶ್ರೀಮಂತನಾದ ಸೋಮಣ್ಣ ಬಲು ಜಿಪುಣನಾಗಿದ್ದ. ತನ್ನ ಬಳಿ ಎಷ್ಟೇ ಹಣವಿದ್ದರು ಅದಕ್ಕೆ ತುಂಬಾ ಆಸೆಪಡುತ್ತಿದ್ದ. ಆತನ ಹೆಂಡತಿಗೆ ಇದರಿಂದ ಉರಿದುಹೋಗಿತ್ತು. ಒಂದು ದಿನ ಸೋಮಣ್ಣನ ಗೆಳೆಯನ ಗೃಹಪ್ರವೇಶಕ್ಕೆ ಹೋಗುವುದರಲ್ಲಿದ್ದ. ದೂರದಲ್ಲಿರುವ ಗೆಳೆಯನ ಮನೆಗೆ ವಾಹನ ಮಾಡಿಕೊಂಡು ಹೋಗುವ ಬದಲು ನಡೆದುಕೊಂಡು ಹೋದ. ಊಟ ಮುಗಿಸುವ ಹೊತ್ತಿಗೆ ಅಲ್ಲಿಗೆ ತಲುಪಿದ. ಊಟವಾದ ಮೇಲೆ ಅಲ್ಲಿ ಕೊಬ್ಬರಿ ಮಿಠಾಯಿ ನೀಡಿದರು. ಅದು ತಿನ್ನಲು ತುಂಬಾ ರುಚಿಯಾಗಿತ್ತು. ಮನೆಗೆ ಬಂದ ನಂತರ ಕೊಬ್ಬರಿ ಮಿಠಾಯಿ ತಿನ್ನಬೇಕೆಂಬ ಹಂಬಲ ಸೋಮಣ್ಣನಲ್ಲಿ ಉಂಟಾಯಿತು. ತನ್ನ ಮಡದಿಯಲ್ಲಿ ತಿಳಿಸಿದಾಗ ಆಕೆ ಬೈದಳು. ಅದಕ್ಕೆ ತೆಂಗಿನಕಾಯಿ ಬೇಕಾಗುತ್ತದೆ ಎಂದು. ಸೋಮಣ್ಣನು ಕೊಬ್ಬರಿಮಿಠಾಯಿಯ ಆಸೆಯನ್ನು ಬಿಟ್ಟನು. ಆದರೆ ರಾತ್ರಿ ಆತನಿಗೆ ಕೊಬ್ಬರಿ ಮಿಠಾಯಿಯ ಕನಸು ಬಿತ್ತು. ಮರುದಿನ ನಿದ್ದೆಯಿಂದ ಎದ್ದೇಳುವಾಗ ಕೊಬ್ಬರಿ ಮಿಠಾಯಿ ಬೇಕೆಂಬ ಹಂಬಲ ಉತ್ಕಟವಾಯಿತು. ಅದಕ್ಕೆ ಬೇಕಾಗಿ ತೆಂಗಿನಾಯಿ ತರಲು ಪೇಟೆಗೆ ಹೊರಟ. ಪೇಟೆಯಲ್ಲಿ 5 ರೂಪಾಯಿಗೆ ತೆಂಗಿನಕಾಯಿ ಕೇಳಿದ. ಆದರೆ ಅಂಗಡಿಯಲ್ಲಿ 7ರೂಪಾಯಿಗೆ ಕೊಡುತ್ತೇನೆಂದರು. ಆದರೆ ಸೋಮಣ್ಣ ಅಂಗಲಾಚಿದಾಗ ಇಲ್ಲಿಂದ 5ಕಿಲೋಮೀಟರ್ ದೂರದಲ್ಲಿರುವ ಹಳ್ಳಿಯಲ್ಲಿ 5 ರೂಪಾಯಿಗೆ ಸಿಗಬಹುದು ಎಂದರು. ಸೋಮಣ್ಣ ಹಳ್ಳಿಗೆ ನಡೆದು ಅಲ್ಲಿ 3ರೂಪಾಯಿಗೆ ತೆಂಗಿನಕಾಯಿ ಕೇಳಿದನು. ಅಲ್ಲಿನ ಅಂಗಡಿಯವರು 5 ರೂಪಾಯಿಗೆ ಕೊಡಬಹುದು 3 ರೂಪಾಯಿಗೆ ಅಂದರೆ ತೆಂಗಿನ ಉಗ್ರಾಣದಲ್ಲಿ ಸಿಗುತ್ತದೆ. ಎಂದರು. ತೆಂಗಿನ ಉಗ್ರಾಣಕ್ಕೆ ತಲುಪಿದ ಸೋಮಣ್ಣ 1ವರೆ ರೂಪಾಯಿಗೆ ಕೇಳಿದನು. ಆಗ ಉಗ್ರಾಣದವರು ಇನ್ನು 5 ಕಿಲೋಮೀಟರ್ ನಡೆದರೆ ತೆಂಗಿನ

ತೋಟ ಸಿಗುತ್ತದೆ. ಅಲ್ಲಿ ಉಚಿತವಾಗಿ ತೆಂಗಿನಕಾಯಿ ಸಿಗುತ್ತದೆ ಎಂದರು. ಸೋಮಣ್ಣ ತೆಂಗಿನ ತೋಟಕ್ಕೆ ಬಂದು ಮರಹತ್ತಿ ಆಯ ತಪ್ಪಿ ನೇತಾಡ ತೊಡಗಿದನು. ಆಗ ಕೆಳಗೆ ಒಬ್ಬ ಕುದುರೆಯವನಲ್ಲಿ ರಕ್ಷಿಸಲು ಅಂಗಲಾಚಿದನು. ಕುದುರೆಯವನು 500 ರೂಪಾಯಿ ಕೊಟ್ಟರೆ ರಕ್ಷಿಸುವೆನೆಂದನು. ಸೋಮಣ್ಣ ಒಪ್ಪಿದಾಗ ಕುದುರೆಯವನು ಕುದುರೆ ಮೇಲೆ ನಿಂತು ರಕ್ಷಿಸಲು ಪ್ರಯತ್ನಿಸುತ್ತಿರುವಾಗ ಇಬ್ಬರ ಭಾರಕ್ಕೆ ಕುದುರೆ ಹಾರಿತು. ಇಬ್ಬರೂ ನೆಲಕ್ಕೆ ಬಿದ್ದು ಬಿಟ್ಟರು. ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ನೀಡಲಾಯಿತು. 5 ರೂಪಾಯಿಯ ಜಿಪುಣತನಕ್ಕೆ ಸೋಮಣ್ಣನು ಹತ್ತು ಸಾವಿರ ರೂಪಾಯಿಗಳನ್ನು ಕಳೆದುಕೊಂಡನು. ಅಲ್ಲಿಂದ ಸೋಮಣ್ಣನು ತನ್ನ ಜಿಪುಣತನ ಬಿಟ್ಟು ಬಿಟ್ಟನು.(ಸಾತ್ವಿಕ್ ಎನ್ 8ಡಿ)

## ಪಾಠ ಕಲಿತ ನರಿ

ಒಂದಾನೊಂದು ಕಾಲದಲ್ಲಿ ಒಂದು ಅರಣ್ಯದಲ್ಲಿ ಒಂದು ನರಿ ಇತ್ತು. ಅದಕ್ಕೆ ತುಂಬಾ ಹಸಿವಾಗಿತ್ತು. ಅದು ಆಹಾರ ಹುಡುಕುತ್ತಾ ಹಳ್ಳಿಯ ಕಡೆಗೆ ಸಾಗಿತ್ತು. ನಡೆದು ಬರುತ್ತಿರುವಾಗ ದಾರಿಯ ಪಕ್ಕದ ಬುಡದಲ್ಲಿರುವಿಲಿಯ ಬಿಲದೊಳಗೆ ಮಾಂಸದ ತುಂಡೊಂದು ಕಂಡಿತು. ಅದನ್ನು ನೋಡಿದಾಗ ನರಿಯ ಬಾಯಲ್ಲಿ ನೀರೂರಿತು. ಅದನ್ನು ಕಚ್ಚಿಕೊಂಡುಬರುತ್ತಿರುವಾಗ ದಾರಿಯಲ್ಲಿ ಕೋಳಿಯ ಗೂಡು ಕಂಡಿತು. ಅದನ್ನು ನೋಡಿ ಮತ್ತಷ್ಟು ಸಂತಸವಾಯಿತು. ಅದು ಕೋಳಿಗಳನ್ನು ನೋಡುತ್ತಾ ನಿಂತಿತು. ಆಗ ಒಂದು ಗೂಬೆಹಾರಿ ಬಂದುನರಿಯಣ್ಣ ನೀನು ಏನನ್ನು ನೋಡುತ್ತಿರುವೆ ಎಂದು ಕೇಳಿತು. ಆಗ ನರಿ ನನಗೆ ಕೋಳಿಗಳ ಯೋಗಕ್ಷೇಮ ವಿಚಾರಿಸುವ ಸಲುವಾಗಿ ಒಳಗೆ ಹೋಗಲು ಕಾತರಿಸುತ್ತಿರುವೆ ಎಂದಿತು. ಆಗ ಗೂಬೆಗೆ ನರಿಯ ಬುದ್ದಿ ತಿಳಿದು ಎಚ್ಚರಿಸಿತು. ಆದರೆ ಎಚ್ಚರಿಕೆಯನ್ನು ಲೆಕ್ಕಿಸದೆ ನರಿ ಕೋಳಿಯ ಗೂಡಿಗೆ ನುಗ್ಗಿತು. ಒಂದು ಕೋಳಿಯನ್ನು ಹಿಡಿದಾಗ ಉಳಿದ ಕೋಳಿಗಳು ನರಿಯನ್ನು ಕುಕ್ಕಲು ಆರಂಭಿಸಿದವು. ಹೇಗೋ ನರಿ ಅಲ್ಲಿಂದ ತಪ್ಪಿಸಿ ಓಡಿಹೋಯಿತು.(ಸೃಜನ್ಯ ಪಿ 8ಎ)

## ಕಾಗೆಗಳ ಉಪಾಯ

ಒಂದಾನೊಂದು ಕಾಡಿನಲ್ಲಿ ಐದು ಕಾಗೆಗಳು ವಾಸವಾಗಿದ್ದವು. ಅದು ಮೊಟ್ಟೆಯನ್ನು ಇಟ್ಟು ಆಹಾರ ಹುಡುಕಲು ಕಾಡಿಗೆ ಹೋಗುತ್ತಿತ್ತು. ಆದರೆ ಹಿಂತಿರುಗಿ ಬರುವಾಗ ಗೂಡಿನಲ್ಲಿ ಮೊಟ್ಟೆಯು ಇರುತ್ತಿರಲಿಲ್ಲ. ಕಾಗೆಗಳಿಗೆ ಆಶ್ಚರ್ಯವಾಗುತ್ತಿತ್ತು. ರಹಸ್ಯವನ್ನು ಬೇಧಿಸಲು ಕಾಗೆಗಳು ಉಪಾಯ ಮಾಡಿದವು. ಒಂದು ದಿನ ಮೊಟ್ಟೆಯನ್ನಿಟ್ಟು ಅವುಗಳು ಕಾಡಿಗೆ ಹೋಗದೆ ಮರೆಯಲ್ಲಿ ಅಡಗಿದವು. ಮರದ ಕೆಳಗೆ ಒಂದು ದೊಡ್ಡ ಬಿಲದಲ್ಲಿ ಹೆಬ್ಬಾವೊಂದು ವಾಸವಾಗಿತ್ತು. ಕಾಗೆಗಳು ಕಾಡಿಗೆ ಹೋಗಿರಬಹುದೆಂದು ಯೋಚಿಸಿ ಅದು ಕಾಗೆಗಳ ಗೂಡಿಗೆ ಆಕ್ರಮಿಸಿ ಮೊಟ್ಟೆಯನ್ನೆಲ್ಲಾ ನುಂಗಿಬಿಟ್ಟಿತು. ಕಾಗೆಗಳು ಇದನ್ನೆಲ್ಲಾ ನೋಡುತ್ತಾ ದ್ದವು. ಅವುಗಳು ಹೆದರಿಬಿಟ್ಟಿದ್ದವು. ಹೆಬ್ಬಾವನ್ನು ಮಣಿಸಲು ಕಾಗೆಗಳು ಆಲೋಚಿಸಿದವು. ಆ ಮರದ ಹತ್ತಿರ ಮುಂಗುಸಿಗಳ ಬಿಲವಿತ್ತು. ಕಾಗೆಗಳು ಪಕ್ಕದ ಹೊಳೆಯಿಂದ ಸುಮಾರು ಮೀನುಗಳನ್ನು ತಂದು ಮುಂಗುಸಿಯ ಬಿಲದಿಂದ ಹಾವಿನ ಬಿಲದಲ್ಲಿಯರೆಗೆ ಹಾಕಿದವು. ಮುಂಗುಸಿಗಳು ಮೀನನ್ನು ತಿಂದು ಹಾವಿನ ಬಿಲದವರೆಗೆ ಬಂದವು. ಆಗ ಮೆಲ್ಲನೆ ಹಾವ ಹೊರಬಂದಿತು. ಆಗ ಮುಂಗುಸಿಗಳು ಹಾವಿನ ಮೇಲೆ ಬಿದ್ದು ಅದನ್ನು ಮುಗಿಸಿಬಿಟ್ಟವು. ಆಗ ಕಾಗೆಗಳು ನೆಮ್ಮದಿಯ ನಿಟ್ಟುಸಿರು ಬಿಟ್ಟವು. ನಂತರ ಅವುಗಳಿ ಮೊಟ್ಟೆ ಇಟ್ಟು ನಿರ್ಭೀತಿಯಿಂದ ಆಹಾರ ಹುಡುಕಲು ಕಾಡಿಗೆ ಭಯವಿಲ್ಲದೆ ಹೋಗುತ್ತಿತ್ತು. (ಮನೀಶ್ ಎಸ್ 8ಸಿ)

## ತಪ್ಪಿನ ಅರಿವು

ಅರ್ಜುನ್ ಗೆ 14 ವರ್ಷ. ಸಿರಿವಂತ ಹುಡುಗ. ಇವನ ತಾಯಿ ಚಿಕ್ಕ ವಯಸ್ಸಿನಲ್ಲಿಯೇ ತೀರಿಕೊಂಡಿದ್ದರು. ಅರ್ಜುನ್ ತಂದೆ ಹೊರದೇಶದಲ್ಲಿ ಕೆಲಸ ಮಾಡುತ್ತಿದ್ದರು. ಅರ್ಜುನ್ ನೋಡಿಕೊಳ್ಳಲು ಆಳುಗಳನ್ನು ನೇಮಿಸಿದ್ದರು. ಆದುದರಿಂದ ಇವನಿಗೆ ಬುದ್ಧಿ ಹೇಳಲು ಯಾರೂ ಇರಲಿಲ್ಲ. ಅರ್ಜುನ್ ಶ್ರೀಮಂತಿಕೆಯಲ್ಲೇ ಬೆಳೆದಿದ್ದನು. ಇವನು ತರಗತಿಯಲ್ಲಿ ತರಗತಿಗೆ ಪ್ರಥಮ. ಈತನ ತರಗತಿಯಲ್ಲೆ ಅಭಿಜಿತ್ ಎಂಬ ಹುಡುಗ ಸೇರಿಕೊಂಡು ಕೆಟ್ಟ ಅಭ್ಯಾಸವನ್ನು ಬೆಳೆಸಿದ್ದ. ಒಂದು ದಿನ ಅವನ ಶಾಲಾ ಬ್ಯಾಗಿನಲ್ಲಿ ಸಿಗರೆಟ್ ಸಿಕ್ಕಿತ್ತು. ನೀನು ಪರೀಕ್ಷೆಯಲ್ಲಿ ಮುಂದಿದ್ದರೆ ಸಾಲದು ಕೆಟ್ಟ ಅಭ್ಯಾಸವನ್ನು ಬಿಡಬೇಕು. ಆದರೆ ಅರ್ಜುನ್ ತಿದ್ದಿಕೊಳ್ಳಲಿಲ್ಲ. ಮತ್ತು ಮತ್ತು ತಪ್ಪು ಮುಂದುವರಿಸಿದಾಗ ಶಾಲೆಯಿಂದ ಹೊರಗುಳಿಯಬೇಕಾಯಿತು. ಅರ್ಜುನ್

ತಂದೆಗೆ ವಿಷಯ ತಿಳಿಸದಾಗ ಅವರೂ ನಿರ್ಲಕ್ಷಿಸಿದರು. ಅರ್ಜುನ್ ತನ್ನ ಅಭ್ಯಾಸವನ್ನು ಮುಂದುವರಿಸಿದ. ಒಂದು ದಿನ ಬೆಳಗ್ಗೆ ನಿದ್ದೆಯಿಂದ ಎದ್ದಾಗ ಆತನ ಬಾಯಲ್ಲಿ ಹುಣ್ಣು ಇರುವುದು ಕಂಡುಬಂತು. ಅವನನ್ನು ತಕ್ಷಣ ಆಸ್ಪತ್ರೆಗೆ ಸೇರಿಸಿದಾಗ ಕ್ಯಾನ್ಸರ್ ಎಂದು ತಿಳಿಯಿತು. ಅವನಿಗೆ ದಿಕ್ಕೇ ತೋಚಲಿಲ್ಲ. ವಿದೇಶದಲ್ಲಿದ್ದ ತಂದೆ ಓಡಿ ಬಂದರು. ವೈದ್ಯರಲ್ಲಿ ನಿವೇದಿಸಿ ಮಗನನ್ನು ರಕ್ಷಿಸುವಂತೆ ಕೇಳಿಕೊಂಡರು. ವೈದ್ಯರು ತಮ್ಮ ಶತಪ್ರಯತ್ನದಿಂದ ಮಗನನ್ನು ಉಳಿಸಿದರು. ಅರ್ಜುನ್ ತಂದೆಗೆ ಈಗ ತನ್ನ ತಪ್ಪಿನ ಅರಿವಾಯಿತು. ಅವರು ಊರಿನಲ್ಲೆ ದುಡಿದು ಮಗನಿಗೆ ಬುದ್ಧಿ ಹೇಳಿದರು. ಅರ್ಜುನ್ ಕೂಡಾ ಬುದ್ಧಿಯನ್ನು ತಿದ್ದಿಕೊಂಡು ಶಾಲೆಗೆ ಮತ್ತೆ ಸೇರಿ ತರಗತಿಗೇ ಪ್ರಥಮನಾದನು.(ಸಾತ್ವಿಕ್ ಎನ್ 8ಡಿ)

## <u>ಪ್ರಕೃತಿಯ ಸೊಬಗು</u>

ಅಮ್ಮ ಒಂದಿಗೆ ರಜೆಯಲಿ ನಾನು

ಅಜ್ಜನ ಮನೆಗೆ ಹೋಗಿದ್ದೆ

ಬಸ್ಸಿನ ಕಿಟಕಿಯ ಬದಿಯಲಿ ಕುಳಿತು

ಪ್ರಯಾಣ ಮಾಡಿದ್ದೆ

ದಾರಿಯ ಬದಿಯಲಿ ತುಂಬಿದ ನೀರಿನ

ನದಿಯನು ನೋಡಿದ್ದೆ

ದಡದಲಿ ತೆಂಗಿನ ಕಂಗಿನ ಮರಗಳ

ಸಾಲನು ಕಂಡಿದ್ದೆ

ಹರಿಯುವ ನೀರಲಿ ಸಾಗುತಲಿರುವ

ದೋಣಿಯ ಕಂಡಿದ್ದೆ

ಬಸ್ಸಿಂದಿಳಿದು ಬಯಲಿನ ಸೊಬಗನು

ನೋಡುತ ಸಾಗಿದ್ದೆ

ಕೆರೆಯ ತಿಳಿನೀರನು ಕಂಡು

ಅದರಲಿ ಇಳಿದಿದ್ದೆ

ಕೈ ಕಾಲ್ತೊಳೆಯುತ ನೀರನು ಚಿಮ್ಮಿಸಿ

ಸಂತಸ ಪಟ್ಟಿದ್ದೆ

ಸಂಭ್ರಮದಿಂದ ಪ್ರೀತಿಯ ಅಜ್ಜಿಯ

ತೋಳಲಿ ಸೇರಿದ್ದೆ

ಸಂತಸದಾಕ್ಷಣ ನೆನಪಲಿ ನಾ

ಕವನವ ಬರೆದಿದ್ದೆ

(ನಿಧಿ ಎ 6ಸಿ)

**ಸಂಜೆ ಸಮಯ**

ಬಾನಿನಿಂದಿಳಿದನು

ಬೆಳಗುವ ಸೂರ್ಯ

ಸಂಜೆಯ ಸಮಯದಲ್ಲಿ

ಆಡುವ ಮಕ್ಕಳ

ಬಳಗವು ಸಾಗಿತು

ಮನೆಗಡೆ ನಲಿಯುತಲಿ

ಹಕ್ಕಿಗಳು ಚಿಲಿಪಿಲಿ ಎನ್ನುತ

ಗೂಡನು ಸೇರಿತು

ಬಾನಿನಲಿ ಬಂಗಾರಚಂದ್ರನು

ಪಳಪಳನೆ ಹೊಳೆಯಿತು

ಬೆಳಕನ್ನು ಕೊಟ್ಟನು

(ಧನ್ಯಶ್ರೀ ಪಿ 6ಸಿ)

## ಬುದ್ಧಿವಂತ ಬಾಲಕ

ಅದೊಂದು ಸಣ್ಣ ಊರು. ಆ ಊರಿನಲ್ಲಿ ತುಂಬಾ ಸಣ್ಣ ಸಣ್ಣ ಮನೆಗಳು ಇದ್ದವು. ಅವುಗಳಲ್ಲಿ ರಾಮಪ್ಪನದೂ ಒಂದು. ಅವನು ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದನು. ರಾಮಪ್ಪ ದಂಪತಿಗಳಿಗೆ ಒಂದು ಸುಂದರವಾದ ಮಗುವಿತ್ತು. ಅದು ಆ ಕೇರಿಯವರ ಕಣ್ಮಣಿಯಾಗಿತ್ತು. ಒಂದು ದಿನ ರಾಮಪ್ಪನು ಕೆಲಸಕ್ಕೆಂದು ಹೋಗಿದ್ದನು. ಅವನ ಹೆಂಡತಿಯು ಮನೆಗೆಲಸದಲ್ಲಿ ನಿರತಳಾಗಿದ್ದಳು. ಮಗುವು ಆಡುತ್ತಾ ಆಡುತ್ತಾ ಅಂಗಳಕ್ಕೆ ಇಳಿಯಿತು. ಅಲ್ಲಿ ಹರಿದಾಡುತ್ತಿದ್ದ ಹಾವನ್ನು ಆಡಿಕೆ ಎಂದು ಭಾವಿಸಿ ಕೈಯಲ್ಲಿ ಹಿಡಿಯಿತು. ಇದನ್ನು ಕಂಡ ನೆರೆಮನೆಯಾಕೆ ಕಿಟಾರನೆ ಕಿರುಚಿದಳು. ಬೊಬ್ಬೆ ಕೇಳಿ ಕೇರಿಯವರೆಲ್ಲಾ ಓಡಿ ಬಂದರು. ಆ ಸಂದರ್ಭದಲ್ಲಿ ಏನು ಮಾಡುವುದೆಂದು ಯಾರಿಗೂ ತೋಚಲಿಲ್ಲ. ಆ ಗುಂಪಿನಲ್ಲಿ ಹತ್ತು ವಯಸ್ಸಿನ ಒಬ್ಬ ಬುದ್ಧಿವಂತ ಬಾಲಕನಿದ್ದನು. ಅವನು ತನ್ನ ಒಂದು ಸಉಂದರವಾದ ಆಟಿಕೆಯನ್ನು ತಂದು ಮಗುವಿನ ಮುಂದಿಟ್ಟನು. ಆಟಿಕೆಯನ್ನು ತಂದು ಮಗುವಿನ ಮುಂದಿಟ್ಟನು. ಆಟಿಕೆಯನ್ನು ಕಂಡ ಮಗುವು ತನ್ನ ಕೈಯಲ್ಲಿದ್ದ ಹಾವನ್ನು ಬಿಟ್ಟು ಅದರತ್ತ

ಕೈಚಾಚಿತು. ತಾಯಿಯು ಓಡಿ ಬಂದು ಮಗುವನ್ನು ಎತ್ತಿಕೊಂಡಳು. ಊರಿನ ಎಲ್ಲರೂ ಅವಳ ಬುದ್ಧಿವಂತಿಕೆಗೆ ತಲೆದೂಗಿದರು. ರಾಮಪ್ಪ ದಂಪತಿಗಳು ತಮ್ಮ ಮಗುವಿನ ಪ್ರಾಣವನ್ನು ರಕ್ಷಿಸಿದ ಬಾಲಕನಿಗೆ ಅನಂತಾನಂತ ಕೃತಜ್ಞತೆಗಳನ್ನು ಸಲ್ಲಿಸಿದರು. ನೀತಿ: ಉಪಾಯದಿಂದ ಅಪಾಯ ತಪ್ಪಿಸಬಹುದು.(ನಿಧಿ ಎ 6ಸಿ)

## ಅಹಂಕಾರಿಯಾದ ಸೋಮು

ಒಂದೂರಿನಲ್ಲಿ ರಾಜು ಎಂಬ ಹೆಸರಿನ ಒಬ್ಬ ವಾಸಮಾಡುತ್ತಿದ್ದನು. ಅವನಿಗೆ ತಂದೆ ತಾಯಿ ಯಾರೂ ಇರಲಿಲ್ಲ. ಆತ ಆ ಊರಿನ ಒಬ್ಬ ದೊಡ್ಡ ಶ್ರೀಮಂತನ ಮನೆಯಲ್ಲಿ ಕೆಲಸಮಾಡುತ್ತಾ ಶಾಲೆಗೆ ಹೋಗುತ್ತಿದ್ದನು. ವಾಸಿಸಲು ಸರಿಯಾದ ಮನೆಯಿಲ್ಲದ ಕಾರಣ ಶ್ರೀಮಂತನ ಮನೆಯಲ್ಲಿ ಆತನಿಗೆ ಆಶ್ರಯ ನೀಡಿದ್ದರು. ಶ್ರೀಮಂತರಾಗಿದ್ದ ಅವರು ರಾಜುವನ್ನು ತಮ್ಮ ಮಗನಾದ ಸೋಮುವಿನಂತೆಯೇ ನೋಡಿಕೊಳ್ಳುತ್ತಿದ್ದರು. ರಾಜು ಹಾಗೂ ಸೋಮು ಒಂದೇ ತರಗತಿಯಲ್ಲಿ ಕಲಿಯುತ್ತಿದ್ದರು. ಒಂದು ದಿನ ಅದು ಪರೀಕ್ಷೆಯ ಸಮಯ. ಪರೀಕ್ಷೆ ಬರೆದ ರಾಜುವಿಗೆ ಸೋಮುವಿಗಿಂತ ಅಧಿಕ ಮಾರ್ಕ್ ಲಭಿಸಿತ್ತು. ಸೋಮು ತನ್ನ ತಂದೆಗೆ ಮಾರ್ಕನ್ನು ತೋರಿಸಿದನು. ಸೋಮುವಿನ ತಂದೆ ಖುಷಿಪಟ್ಟರು. ನಂತರ ರಾಜುವಿನಲ್ಲಿ ಉತ್ತರ ಪತ್ರಿಕೆ ತೋರಿಸಲು ಹೇಳಿದರು. ರಾಜುವಿನ ಅಂಕವನ್ನು ನೋಡಿ ಖುಷಿಪಟ್ಟರು. ಪಕ್ಕದಲ್ಲಿದ್ದ ಸೋಮುವಿಗೆ ಇದು ಹಿಡಿಸಲಿಲ್ಲ. ಒಂದು ದಿನ ಶಾಲೆಯಿಂದ ಮನೆಗೆ ಮರಳುತ್ತಿದ್ದಾಗ ರಾಜುವನ್ನು ಸೋಮು ದೂಡಿಹಾಕಿದನು. ನೋವಿನಿಂದ ರಾಜು ಕೂಗಿದ್ದನ್ನು ಕೇಳಿ ಊರವರು ಆತನನ್ನು ಆಸ್ಪತ್ರೆಗೆ ದಾಖಲಿಸಿದರು. ವಿಷಯ ತಿಳಿದು ಸೋಮುವಿನ ತಂದೆ ಅಲ್ಲಿಗೆ ದೌಡಾಯಿಸಿದರು. ಇದಕ್ಕೆ ಸೋಮುವೇ ಕಾರಣವೆಂದು ತಿಳಿದು ಬೈದರು. ರಾಜುವಿನ ಬಳಿಹೋದಾಗ ರಾಜುವು 'ನೀವು ಸೋಮುವನ್ನು ಬೈದರೆ ಅವನಿಗೆ ನನ್ನ ಮೇಲೆ ಸಿಟ್ಟು ಬರುತ್ತದೆ. ನೀವು ಅವನನ್ನು ಬೈಯಬೇಡಿ' ಎಂದು ಹೇಳಿದನು. ಸೋಮುವಿನ ತಂದೆ ಮಗನನ್ನು ಬುದ್ಧಿಹೇಳಿ ಸರಿದಾರಿಗೆ ತಂದರು.ಮ ನೀತಿ:ಯಾವಾಗಲು ನಾವು ಅಹಂಕಾರ ಮಾಡಬಾರದು.(ಶ್ರಜ್ಞ ಆರ್ 9ಡಿ)